**ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ**

ಸಿ.ಸಿ.ನಂಃ 26750/2019

ಚಾಸಾಃ 6 , ಪ್ರಾಸಾಃ 3

| | |
|---|---|
| ಸಾಕ್ಷಿದಾರರ ಹೆಸರುಃ | ಇಮಾಮ್ ಹುಸೇನ್ ತೋಟದ್ |
| ತಂದೆಯ ಹೆಸರುಃ | ಚಮನ್ ಸಾಬ್ |
| ವಯಸ್ಸುಃ | 39 ವರ್ಷ |
| ಉದ್ಯೋಗಃ | ಹೆಚ್.ಸಿಃ8820, ಮಡಿವಾಳ ಪೊಲೀಸ್ ಠಾಣೆ |
| ವಾಸಃ | ಎಲ್.ಐ.ಸಿ ಕಾಲೋನಿ, ಜಯನಗರ, 3ನೇ ಬ್ಲಾಕ್, ಬೆಂಗಳೂರು. |

**ದಿನಾಂಕಃ 03-09-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯವಿಚಾರಣೆ ಹಿರಿಯ ಸ.ಸ.ಅ ಅವರಿಂದಃ-**

1. 2017 ರಿಂದ 2022 ರವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿನಾಂಕಃ 08-09-2019 ರಂದು ಬೆಳಿಗ್ಗೆ ಪಿ.ಐ ರವರು ನನಗೆ ಮತ್ತು ಚಾಸಾ-7 ಮತ್ತು 8 ರವರಿಗೆ ಈ ಪ್ರಕರಣದ ಆರೋಪಿ ಮತ್ತು ಮಾಲುಪತ್ತೆ ಮಾಡುವಂತೆ ನಿರ್ದೇಶಿಸಿರುತ್ತಾರೆ. ಅದರಂತೆ ನಾವು ಬಾತ್ಮಿದಾರರನ್ನು ಸಂಪರ್ಕಿಸಿ ವಿಚಾರಿಸಿದಾಗ ಈ ಪ್ರಕರಣದ ಆರೋಪಿಗಳು ತಿಲಕ್ ನಗರದ ಜಟಕಸ್ಟಾಂಡ್ ಹತ್ತಿರ ಟೀ ಅಂಗಡಿ ಹತ್ತಿರ ಆರೋಪಿ ಬರುತ್ತಾರೆ ಎಂದು ಮಾಹಿತಿ ನೀಡಿದರು. ಅದರಂತೆ ರಾತ್ರಿ

10.10 ಗಂಟೆ ಸಮಯದಲ್ಲಿ ನಾನು, ಚಾಸಾ-7 ಮತ್ತು 8 ರವರನ್ನು ಬಾತ್ಮಿದಾರರ ಜೊತೆಯಲ್ಲಿ ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ ಬಾತ್ಮಿದಾರರು ಒಬ್ಬ ವ್ಯಕ್ತಿಯನ್ನು ತೋರಿಸಿ ಇತನೇ ನಿಮಗೆ ಬೇಕಾಗಿರುವ ಆರೋಪಿ ಎಂದು ತೋರಿಸಿರುತ್ತಾರೆ.

3. ನಂತರ ನಾನು, ಚಾಸಾ-7 ಮತ್ತು 8 ರವರು ಸದರಿ ವ್ಯಕ್ತಿಯನ್ನು ಸುತ್ತುವರೆದು ಹಿಡಿದಿರುತ್ತೇವೆ. ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಿದಾಗ ಆತ ತನ್ನ ಹೆಸರನ್ನು ಸೈಯ್ಯದ್ ಯಾನೇ ಲಂಗೋಟ್ ಬಿನ್ ಸೈಯ್ಯದ್ ಇಂತಿಯಾಜ್, 29 ವರ್ಷ, ವಾಸಃ ಮನೆ ಸಂಖ್ಯೆ 320, 28ನೇ ಮುಖ್ಯರಸ್ತೆ, 31 ಬಿ ಕ್ರಾಸ್, ತಿಲಕ್ ನಗರ ಎಂದು ತಿಳಿಸಿದನು.

4. ಸದರಿ ವ್ಯಕ್ತಿಯ ಬಳಿ ಇದ್ದ ನೀಲಿ ಬಣ್ಣದ ವಿವೋ ವೈ ಫೋನ್ ಬಗ್ಗೆ ವಿಚಾರಿಸಿದಾಗ ಸದರಿ ವ್ಯಕ್ತಿಯು ಸಮಂಜಸವಾದ ಉತ್ತರ ನೀಡಲಿಲ್ಲ. ಆದ್ದರಿಂದ ಆರೋಪಿಯನ್ನು ಮೊಬೈಲ್ ಸಹಿತ ಕರೆದುಕೊಂಡು ಬಂದು ಪಿ.ಐ ರವರ ಮುಂದೆ ಹಾಜರುಪಡಿಸಿರುತ್ತೇನೆ. ಅದರ ಬಗ್ಗೆ ನನ್ನ ವರದಿ ನೀಡಿರುತ್ತೇನೆ.

5. ಸಾಕ್ಷಿಯು ವಿ.ಸಿ ಮುಖಾಂತರ ಕೇಂದ್ರ ಕಾರಾಗೃಹದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯು ನಿವೇದನೆಯನ್ನು ನೋಡಿ ಗುರುತಿಸಿದ್ದಾರೆ.

ಆದ್ದರಿಂದ ಸದರಿ ನಿವೇದನೆಯನ್ನು ನಿಪಿ–4 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.

6. ಸಾಕ್ಷಿಯು ನಿಪಿ–3 ರಲ್ಲಿ ಕಾಣುವ ಫೋನ್‌ನನ್ನು ನೋಡಿ ಗುರುತಿಸಿದ್ದಾರೆ.

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಗೈರುಹಾಜರಾಗಿದ್ದಾರೆ. ಆರೋಪಿಯನ್ನೆ ಪ್ರಶ್ನೆ ಕೇಳುವಂತೆ ಸೂಚಿಸಲಾಯಿತು. ಆರೋಪಿಯು ಪ್ರಕರಣಕ್ಕೂ ನನಗೂ ಸಂಬಂಧವಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)

ಮು. ಮ. ದಂ. ನ್ಯಾ ಬೆಂ. ನಗರ.